ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1909—10ನೆ ಇಸವಿ ವಿ॥ ಅರ್ಜೀ ನಂಬರ್ 184.

ಕಲ್ಕತ್ತಾದಲ್ಲಿ ಮೃತಪಟ್ಟ ಜಿಂತಲಪಲ್ಲಿ ವೆಂಕಟರತ್ನಂ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಗುಂಡೂರಾವ್, 2ನೆ ರಾಮಚಂದ್ರರಾವ್, ಮೃತಪಟ್ಟ ಸದರಿ ವೆಂಕಟರತ್ನಂ ಯವರಿಗೆ ಮುಖ್ಯವಾರಸ್ದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಕಲ್ಕತ್ತಾ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸದರಿ ವೆಂಕಟರತ್ನಂಯವರ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟ್ ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಗುಂಡೂರಾವ್, ರಾಮಚಂದ್ರರಾವ್ ಇವರುಗಳ ಅರ್ಜಿಯನ್ನು 1909ನೆ ಇಸವಿ ನವಂಬರ್ ತಿಂಗಳು ತಾರೀಖು 26 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಸುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರತ್ನಂ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1909ನೆ ಇಸವಿ ನವಂಬರ್ ತಿಂಗಳು 3ನೆ ತಾರೀಖಿನಲ್ಲಿ ಕೋರ್ಟು ವೊಹರಿ ನಿಕಿ ನಮ್ಮ ದಸ್ತಖತ್ತೊಡನೆ ಕೊಡೋಣವಾಗಿದೆ.

ಟಿ. ಇ. ಜಯರಾವು ಐಯ್ಯರ್,
ಸಬ್ ಜಡ್ಜ್.

ಪ್ರಸಿದ್ಧ ಪತ್ರಿಕೆ.

ಬಳ್ಳೀ ಸಮಯ!

ಶ್ರೀಮತ್ ಮಹಾರಾಜರವರ ಗವರ್ನಮೆಂಟಿನವರು ಈ ರೈಲ್ವೆಗಾಗಿ ಖರ್ಚಾದ ವೊಬಲಗಿನ ಮೇಲೆ ಶೇಕಡ 4 ರಂತೆ ಬಡ್ಡಿಯನ್ನು ಕೊಡುವಹಾಗೆ ಭರವಸೆಯನ್ನು ದಯಪಾಲಿಸಿರುತ್ತಾರೆ; ಮತ್ತು ಇದಕ್ಕಿಂತಲೂ ಹೆಚ್ಚಾದ ಲಾಭವು ದೊರೆಯುವ ಸಂಭವವೂ ಉಂಟು.

ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

1395ನೆ ಇಸವಿಯ 3ನೆ ವೈಸೂರು ಕಂಪನಿ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರ್ ಮಾಡಿಧೆ.

ಮುಖ್ಯ ಆಫೀಸು :—ಬೆಂಗಳೂರು ಚಾವುರಾಜಪೇಟೆ; ಬ್ರಾಂಚ್ ಆಫೀಸು :—ಬೊಂಬಾಯಿ ಕೋಟೆ.

ಮೂಲಧನ 12,00,000 ರೂಪಾಯಿಗಳು.

ಷೇರುಗಳು :—

ಷೇರು 1ಕ್ಕೆ 25 ರೂಪಾಯಿ ಉಳ್ಳ 48,000 ಷೇರುಗಳಾಗಿ ಮೇಲ್ಕಂಡ ಮೂಲಧನವು ಭಾಗಿಸಲ್ಪಟ್ಟಿಧೆ. ಇದರ ಪೈಕಿ ಆಗಲೇ 35,000 ಷೇರುಗಳು ಬೆಕರಿಯಾಗಿಧೆ. ಉಳಿದ 13,000 ಷೇರುಗಳನ್ನು ಈಗ ಜನಗಳು ತೆಗೆದುಕೊಳ್ಳಬಹುದು.

ಷೇರುಗಳನ್ನು ತೆಗೆದುಕೊಳ್ಳತಕ್ಕವರು ಪಾವತಿ ಮಾಡತಕ್ಕ ವೊಬಲಗಿನ ವಿವರ :—ಅಪ್ಲಿಕೇಷನ್‌ವೊಂದಿಗೆ ಷೇರು 1ಕ್ಕೆ 1 ರೂಪಾಯಿಯೂ, ಹಂಚಿಕೆಯ ಕಾಲದಲ್ಲಿ ಷೇರು 1ಕ್ಕೆ 4 ರೂಪಾಯಿಯೂ, ಉಳಿದ 20 ರೂಪಾಯಿಗಳು 4 ಕಂತುಗಳಲ್ಲಿ ಕಂತು 1ಕ್ಕೆ 5 ರೂಪಾಯಿನಂತೆ ನೋಟಿಸ್ ಬಂದ ಕಾಲದಲ್ಲಿ ಕೊಡತಕ್ಕದ್ದು. ಬಂದೊಂದು ಕಂತಿಗೂ 2 ತಿಂಗಳಿಗೆ ಕಡಮೆ ಇಲ್ಲದಂತೆ ವ್ಯವಧಾನ ಕೊಡಲ್ಪಡುವದು.

ಷೇರುಗಳಿಗಾಗಿ ದರಖಾಸ್ತುಗಳನ್ನು ಮೇಲೆ ಹೇಳಿದ ಆಫೀಸುಗಳಲ್ಲಿ ಡೈರೆಕ್ಟರುಗಳಿಗಾದರೂ, ಅಥವಾ ಕಂಪನಿಯ ಬ್ಯಾಂಕುಗಳಿಗಾದರೂ ಬರೆದುಕೊಳ್ಳಬೇಕು.

ಡೈರೆಕ್ಟರುಗಳ ಸಭೆ.

1. ಮ" ರಾ॥ ರಾಜಮಂತ್ರಪ್ರವೀಣ ಸಿ. ಶ್ರೀನಿವಾಸಯ್ಯಂಗಾರ್ಯವರು, ರಿಟೈರ್ಡ್ ಕ್ರಾಸಿಲರ್, ಫೇರ್ವರ್ಮ.

ಮೆ॥ ಗಳಾದ
2. ,, ರಾಯಬಹದ್ದೂರ್ ಎ ಮೈಗಂಡದೇವ ಮೊದಲಿಯಾರ್ಯವರು.
3. ,, ಹಾಜಿ ಇಸ್ಮೇಲ್ ನೇಟುಸವರು.
4. ,, ಬಿ. ನಾಗಪ್ಪನವರು, ಬ್ಯಾರಿಸ್ಟರ್.
5. ,, ಎ. ಮಾಸಿಲಾಮಣಿ ಶೆಟ್ಟರವರು.
6. ,, ಬಿ. ವೆಂಕಟಪತಯ್ಯಂಗಾರ್ಯವರು.
7. ,, ಎ. ಸುಬ್ಬರಾಯರು.
8. ,, ಸಾಹುಕಾರ್ ಗುಬ್ಬಿ ತೋಟದಪ್ಪನವರು.

ಮೆ॥ ಗಳಾದ
9. ,, ಸರ್ ವಿಠಲ್‌ದಾಸ್ ದಾಮೋದರಥ್ಯಾಕರ್ಸೆಯವರು.
10. ,, ಜುನಿಲಾಲ್ ಜಿ. ಸರಯಾಯವರು.
11. ,, ಲಾಲುಬಾಯಿಸಾವಲ್ದಾಸ್‌ರವರು.
12. ,, ವರದರಾಜಯ್ಯಂಗಾರ್ಯವರು.
13. ,, ಸಾಹುಕಾರ್ ಹರಿಯಣ್ಣನವರು.
14. ,, ವಿ. ಎಚ್. ಕರ್ವೆಯವರು.
15. ,, ರಾಮಚಂದ್ರರಾವ್ ಸಿಂಧಿಯಾಯವರು

ಬ್ಯಾಂಕುಗಳು.

1. ಬೆಂಗಳೂರಲ್ಲಿರುವ ಮದರಾಸು ಬ್ಯಾಂಕು. 2. ಬೊಂಬಾಯಿಯಲ್ಲಿ ಇಂಡಿಯರ್ ಸ್ವೀಷಿ ಬ್ಯಾಂಕು.

ಸೂಚನೆ ಪತ್ರ.

1. ಈಗ ಬೆಂಗಳೂರಿಂದ ಚಿಕ್ಕಬಳ್ಳಾಪುರದವರೆಗೂ ಸುಮಾರು 38 ಮೈಲಿಗಳ ದೂರ ಎರಡೂವರೆ ಅಡಿ ಅಗಲವುಳ್ಳ ರೈಲು ಮಾರ್ಗವನ್ನು ಹಾಕಿ, ಅದಕ್ಕೆ ಬೇಕಾದ ಗಾಡಿಗಳು ಮುಂತಾದವುಗಳನ್ನು ತಂದು, ರೈಲು ಗಾಡಿಯನ್ನು ನಡೆಸುವ ಹಾಗೆಯೂ, ಮುಂದಕ್ಕೆ ಇದೇ ರೈಲು ಮಾರ್ಗವನ್ನು ಸಿಡ್ಲಘಟ್ಟ ಚಿಂತಾಮಣಿ ಮಾರ್ಗವಾಗಿ ಮದನಪಲ್ಲಿ ಕಡೆಯೂ ಮತ್ತು ಆನೇಕಲ್ ಮಾರ್ಗವಾಗಿ ಹೊಸೂರು ಕಡೆಯೂ ಬೆಳೆಸುವದೂ, ಈ ಕಂಪೆನಿಯ ಮುಖ್ಯ ಉದ್ದೇಶವು

2. ಈಗ ಉದ್ದೇಶಮಾಡಿರುವ ರೈಲು ದಾರಿ ಹೋಗುವ ಕಡೆಯಲ್ಲೆಲ್ಲವೂ ಜನಗಳು ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳಲ್ಲಿ ಆಸಕ್ತಿ ಉಳ್ಳವರಾದ್ದರಿಂದ, ಪ್ರಯಾಣೀಕರ ಸಂಚಾರವೂ ಮತ್ತು ಪದಾರ್ಥಗಳ ಆಮದು-ರಫ್ತು ವ್ಯಾಪಾರವೂ ವಿಶೇಷವಾಗಿ ನಡೆಯುತ್ತಿರುವುದಲ್ಲದೆ, ಹೊಳೆಗಳು ಇಲ್ಲವಾದಕಾರಣ ದೊಡ್ಡ ಸೇತುವೆ ಮುಂತಾದವುಗಳು ಕಟ್ಟುವದು ಅನಾವಶ್ಯಕವಾದ್ದರಿಂದ, ಈ ರೈಲು ಮಾರ್ಗ ಹಾಕುವದಕ್ಕೆ ಹೆಚ್ಚಾದ ಪ್ರಯಾಸವಿರುವುದಿಲ್ಲವು; ಮತ್ತು ಕಾಂಗಾರಿಗೆ ಬೇಕಾದ ಕಲ್ಲು, ಸುಣ್ಣ, ಮರಳು ಮುಂತಾದ ಪದಾರ್ಥಗಳ್ಯಾವತ್ತೂ ಬಹಳ ಸವಿಾಪದಲ್ಲಿಯೇ ದೊರೆಯುತ್ತವೆ

3. ಈ ಕಂಪೆನಿಯಲ್ಲಿ ಷೇರುಗಳು ಪಡೆಯುತಕ್ಕವರು ಮುಖ್ಯವಾಗಿ ಗಮನಿಸಬೇಕಾದ ಅಂಶವು ಏನಂದರೆ:—ಶ್ರೀಮನ್ಮಹಾರಾಜರವರ ಸರ್ಕಾರದವರು ಶೇಕಡ 4 ರಂತೆ ಬಡ್ಡಿ ಕೊಡುವ ಹಾಗೆ ದಯಪಾಲಿಸಿರುವ ಭರವಸೆಯಿಂದ ಷೇರುದಾರುಗಳಿಗೆ ಶೇಕಡ 4 ಕ್ಕಿಂತಲೂ ಹುಟ್ಟುವಳಿ ಅಂದರೆ, ಬೊರೆಯುವ ಬಡ್ಡಿ, ಎಂದಿಗೂ ಕಡಮೆಯಾಗಲಾರದೆಂಬುವದೇ. ಈ ಲೈನಿನ ಕಾಂಗಾರಿಗೋಸ್ಕರ ತಯಾರ್ಮಾಡಿ ಕಳುಹಿಸಿದ್ದ ಪ್ಲಾನು ಮತ್ತು ಎಸ್ಟಿಮೇಟುಗಳನ್ನು ಇಂಡಿಯಾ ಗೌರ್ನಮೆಂಟಿನವರು ಸಹಾ ಮಂಜೂರ್ಮಾಡಿರುತ್ತಾರೆ. ಇದೂ ಅಲ್ಲದೆ, ಸರ್ಕಾರದವರು ನಮ್ಮ ಕೆಲಸಕ್ಕೆ ಬೇಕಾದ ಜಮೀನುಗಳನ್ನು ಕೊಡಿಸುವಂತೆಯೂ ಮತ್ತು ರೈಲಿಗೋಸ್ಕರ ನಮಿಗೆ ಅನುಕೂಲಪಡುವದಾದರೆ, ತತ್ಕಾಲದಲ್ಲಿ ಇರುವ ರೋಡುಗಳನ್ನು ಬೇಕಾದವುಟ್ಟಿಗೆ ಉಪಯೋಗಿಸಬಹುದೆಂತಲೂ, ಅಪ್ಪಣೆಯನ್ನು ಕೊಟ್ಟಿರುವದ್ದರಿಂದ, ಕಾಂಗಾರಿಯನ್ನು ಬಹಳ ವುಟ್ಟಿಗೆ ಸುಲಭವಾಗಿ ನಡೆಸಲು ಅನುಕೂಲಿಸುವದು; ಮತ್ತು ಕಾಂಗಾರಿ ಸುರು ಆದಲಾಗಾಯಿತು ಷೇರುದಾರುಗಳ ಹಣಕ್ಕೆ ಬಡ್ಡಿಯನ್ನು ಕೊಡಲು ಸರ್ಕಾರದವರು ಅಪ್ಪಣೆಯನ್ನು ಕೊಟ್ಟಿರುತ್ತಾರೆ.

4. ಮೈಸೂರು ಸರ್ಕಾರದವರು ಇಷ್ಟಪಟ್ಟರೆ 20 ವರುಷಗಳ ನಂತರ ಈ ಲೈನನ್ನು ಇತರ ಕಡೆಗಳಲ್ಲಿ ಇರುವ ಪದ್ಧತಿಯನ್ನನುಸರಿಸಿ ತಕ್ಕ ಕ್ರಯವನ್ನು ಕೊಟ್ಟು ನಮ್ಮಿಂದ ತೆಗೆದುಕೊಳ್ಳಬಹುದಾಗಿದೆ.

5. ರೈಲ್ವೆ ಹಾಕುವದಕ್ಕೆ ತಗಲುವ ಖರ್ಚು:—ಕಂಬಿ, ಗಾಡಿ, ಇಂಜಿನ್ ಮುಂತಾದವುಗಳೆಲ್ಲಾ ಸೇರಿ 13,73,278 ರೂಪಾಯಿಗಳು ಆಗಬಹುದೆಂದು ಕಂಪೆನಿ ಇಂಜನಿಯರಿಂದ ಮಾಡಿಸಲ್ಪಟ್ಟ ಅಂದಾಜನ್ನು ಗೌರ್ನಮೆಂಟಿನವರು ಸಹಾ ಒಪ್ಪಿರುತ್ತಾರೆ.

6. ಹುಟ್ಟುವಳಿಯ ಅಂದಾಜು:—ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದಲ್ಲಿ ಕೌನ್ಸಿಲರ್ ಆಗಿರುವ ಮೆ॥ ಕೆ. ಪಿ. ಪುಟ್ಟಣ್ಣ ಶೆಟ್ಟಿಯವರು 1906ನೆ ಮೇ ರಲ್ಲಿ ಬರೆದ ಕಾಗದದಲ್ಲಿ ನಮೂದಿಸಿರುವದೇನಂದರೆ:—ಈ ರೈಲ್ವೆಯಲ್ಲಿ ನಡೆಯಬಹುದಾದ ಆಮದು ರಫ್ತುಗಳ ಅಂದಾಜನ್ನು ಬಹಳವುಟ್ಟಿಗೆ ಕಡಮೆಯಾಗಿಯೇ ಮಾಡಿರುತ್ತದೆ. ಇದಕ್ಕಿಂತಲೂ ಕಡಮೆಯಾಗಲಾರದೆಂಬುವದಕ್ಕೆ ಸಂಶಯವಿಲ್ಲ. ರೈಲ್ವೆ ದೆಸೆಯಿಂದ ಪ್ರಜೆಗಳಿಗೆ ಉಂಟಾಗುವ ಸಾಕರ್ಯಗಳನ್ನನುಸರಿಸಿ, ಈ ರೈಲ್ವೆ ಆದಾಯವು ಮುಂದೆ ಈಗ ಮಾಡಿರುವ ಅಂದಾಜಿಗಿಂತಲೂ ಶೇಕಡ 10 ರಂತೆ ಹೆಚ್ಚಾಗಬಹುದೆಂದು ನಂಬಬಹುದು.

ಮೇಲ್ಕಂಡ ಅಂದಾಜಿನ ವಿವರ.

ಪ್ರಯಾಣೀಕರಿಂದ	...	...	...	ರೂ 40,000
ಸಾಮಾನುಗಳಿಂದ	...	...	...	,, 47,000
ಟಪಾಲ್, ಪಾರ್ಸೆಲ್ ಮುಂತಾದವುಗಳಿಂದ		...	...	,, 5,000
			ಜುಮ್ಲಾ	... ,, 92,000

ಮೇಲ್ಕಂಡ ಅಂದಾಜು ಮಾಡಿದ ತರುವಾಯ ಅಂದರೆ, ಈಚಿಗೆ ಸದರ್ಹ ಮಹರಾಟ ರೈಲ್ವೆ ಕಂಪನಿಯವರ ಆಫೀಸರುಗಳಿಂದ ಮಾಡಲ್ಪಟ್ಟ ತನಿಖೆಯ ಪ್ರಕಾರ, ಪ್ರಯಾಣೀಕರುಗಳಿಂದ 43,344 ರೂಪಾಯಿಗಳು, ಸಾಮಾನುಗಳಿಂದ 65,738 ರೂಪಾಯಿಗಳು, ಟಪಾಲು ವಗೈರೆಯಿಂದ 5,000 ರೂಪಾಯಿಗಳು, ಜುಮ್ಲಾ 1,14,0 2 ರೂಪಾಯಿಗಳು ಹುಟ್ಟುವಳಿ ಅಂದಾಜಾಗಿರುತ್ತದೆ ಇಷ್ಟು ಕ್ಷಿಪ್ರದಲ್ಲಿಯೇ ಹುಟ್ಟುವಳಿಯ ಅಂದಾಜಿನಲ್ಲಿ ಸುಮಾರು 22,000 ರೂಪಾಯಿಗಳು ಹೆಚ್ಚಾಗಿಯೇ ಕಾಣಬರುವುದರಿಂದ, ಮುಂದಕ್ಕೆ ದೇಶಾಭಿವೃದ್ಧಿಯು ಅತಿ ಸುಲಭವಾಗಿ ಆಗಬಹುದೆಂಬುವ ಭರವಸೆ ಉಂಟಾಗಿರುತ್ತದೆ.

7. ಮೇಲ್ಕಂಡ 1,14,082 ರೂಪಾಯಿ ಹುಟ್ಟುವಳಿಯಲ್ಲಿ ಓಲ್ಡ್ ಖರ್ಚು ಜಾತಾ ಉಳಿಯುವ 56,000 ರೂಪಾಯಿಗಳಿಂದ ಲೈನಿಗೋಸ್ಕರ ವೆಚ್ಚನ್ನುಮಾಡುವ ಹಣಕ್ಕೆ ಶೇಕಡ 4 ಕ್ಕಿಂತಲೂ ಹೆಚ್ಚಾಗಿ ಲಾಭವೂ ಹಂಚಬಹುದು.

8. ಮೇಲ್ಕಂಡ ಈ ಅಂದಾಜುಗಳಲ್ಲಿ ಹುಟ್ಟುವಳಿಯು ಕನಿಷ್ಟಪಕ್ಷವಾಗಿಯೂ ಖರ್ಚು ವೆಚ್ಚಗಳು ಹೆಚ್ಚಾಗಿಯೂ ಗಣಿಸಿಧೆ ಎಂಬ ವಿಷಯವನ್ನು ಜ್ಞಾಪಕದಲ್ಲಿಡತಕ್ಕದ್ದಾಗಿದೆ. ಮೆ॥ ಕೌನ್ಸಿಲರ್ ಪುಟ್ಟಣ್ಣಶೆಟ್ಟರವರು ಹೇಳಿರುವವರ ಜೊತೆಗೆ ಆಮದುರಫ್ತು ತನಿಖೆಯನ್ನು ಮಾಡಲಿಕ್ಕೆ ಮೆ॥ ಪುಟ್ಟಣ್ಣ ಶೆಟ್ಟರವರಿಗೆ ಸಹಾಯವಾಗಿ ನೇಮಿಸಲ್ಪಟ್ಟಿದ್ದ ಮೆ॥ ಕೆ. ಆರ್. ಶ್ರೀನಿವಾಸ್ಯೆಯ್ಯಂಗಾರ್, ಎಂ. ಎ. ಯವರು ಸರ್ಕಾರಿ ರಿಪೋರ್ಟಿನಲ್ಲಿ ಬರೆದಿರುವುದನ್ನು ಗಮನಿಸಬೇಕಾಗಿದೆ. ಅದೇನಂದರೆ:—ಈ ಅಂದಾಜಾಪಟ್ಟಿಯನ್ನು ಬರೆಯುವದರಲ್ಲಿ ನಾನು ಬಹಳ ಜಾಗರೂಕನಾಗಿದ್ದೆನಾದಕಾರಣ ನಿಜವಾಗಿ ಹುಟ್ಟುವಳಿ ಆಗುವುದಕ್ಕಿಂತಲೂ ಕಡಮೆಯಾಗಿಯೇ ಗಣಿಸಿ ಬರೆದಿರುವ ಆಮದು ರಫ್ತುಗಳ ಸಂಖ್ಯೆಗಳು ಕನಿಷ್ಟಪಕ್ಷವೆಂದು ತಿಳಿಯತಕ್ಕದ್ದು.

9. ಮೇಲ್ಕಂಡ ರಿಪೋರ್ಟುಗಳು ಮತ್ತು ಸಂಖ್ಯೆಗಳಿಂದಲೇ ಎಲ್ಲವೂ ವೇದ್ಯವಾಗಬಹುದು. ರೈಲ್ವೆ ಬರುವುದರಿಂದ ಆಯಾ ದೇಶದಲ್ಲಿ ಕೃಷಿವಾಣಿಜ್ಯಗಳು ಅಭಿವೃದ್ಧಿಯನ್ನು ಹೊಂದುವವು ಎಂಬ ಸಂಗತಿ ಎಲ್ಲರಿಗೂ ತಿಳಿದೇ ಇದೆ. ಅಂಥಾ ಅಭಿವೃದ್ಧಿಯಿಂದ ರೈಲ್ವೆಯ ನಫೆಯು ಸಂದೇಹವಿಲ್ಲದೆ ಅಭಿವೃದ್ಧಿ ಆಗುವುದರಿಂದ ಗಾರ್ನ್ಟಿ ಮೆಂಟನವರು ಭರವಸೆ ಕೊಟ್ಟಿರುವ ೯ಕಡಾ 4 ಕಿಂತಲೂ ಹೆಚ್ಚಾದ ನಫೆ ಉಂಟಾಗಬಹುದೆಂದು ನಿಸ್ಸಂದೇಹವಾಗಿ ಊಹಿಸಬಹುದು.

10. ಬೊಂಬಾಯಿಯಲ್ಲಿ ಘನತೆಯುಳ್ಳ ಮೆ॥ ವಿಠಲದಾಸ್ ದಾಮೋದರ ಥ್ಯಾಕರ್ಸೆ ಯವರು ಈ ಕಂಪೆನಿಗೆ ಮಾಡಿರುವ ಸಹಾಯಕ್ಕೋಸ್ಕರವಾಗಿ ಅವರು (ಎಕ್ಸ್ ಅಫಿಷಿಯೋ) ಮ್ಯಾನೇಜಿಂಗ್ ಡೈರಕ್ಟರಾಗಿ ನೇಮಿಸಲ್ಪಟ್ಟು, ಅವರಿಗೆ ಕೊಡತಕ್ಕ ರು ಸುಂಗಳನ್ನು ಈ ಕಂಪೆನಿ ನಿಬಂಧನೆಗಳಲ್ಲಿ ನಮೂದು ಮಾಡಿರುತ್ತೆ. ಇಷ್ಟವಿದ್ದವರು ಕಂಪೆನಿಯ ಆಫೀಸುಗಳಿಂದ ವಿಚಾರಿಸಿ ತಿಳಿದುಕೊಳ್ಳಬಹುದು.

11. ಕಂಪೆನಿಯ ಪ್ರಸಿದ್ಧ ಪತ್ರಿಕೆಗಳು ಮತ್ತು ಅಟ್ಟಾರ್ನಿ ಫಾರಂಗಳು ಬೆಂಗಳೂರು ಚಾಮರಾಜಪೇಟೆಯಲ್ಲಿ ಇರುವ ಹೆಡ್ಡಾಫೀಸಿನಲ್ಲಿಯೂ ಮತ್ತು ಬೊಂಬಾಯಿಯಲ್ಲಿರುವ ಆಫೀಸಿನಲ್ಲಿಯೂ ಮತ್ತು ಕಂಪೆನಿಯ ಬ್ಯಾಂಕರುಗಳಿಂದಲೂ ಪಡೆಯಬಹುದು. ಕಂಪೆನಿಯ ನಿಬಂಧನೆಗಳನ್ನು ಮೇಲ್ಕಂಡ ಆಫೀಸುಗಳಲ್ಲಿ, ಪ್ರತಿಗೆ 2 ಆಣೆಯಂತೆ ಕ್ರಯಕ್ಕೆ ಪಡೆಯಬಹುದು.

ಬೆಂಗಳೂರು,
8ನೆ ಅಕ್ಟೋಬರ್ 1909.

ಸಿ. ಶ್ರೀನಿವಾಸೈಯ್ಯಂಗಾರ್,
ಚೇರ್ಮೆ.

ಷೇರುಗಳಿಗಾಗಿ ಬರೆದುಕೊಳ್ಳಬೇಕಾದ ದರಖಾಸ್ತು ನಮೂನೆ.

ಡೈರೆಕ್ಟರುಗಳಿಗೆ,

ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ, ಲಿಮಿಟೆಡ್

ಮಂಡಿ ಕಟ್ಟಡಗಳು, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಯ್ಯಾ,

ಮೇಲೆ ನಮೂದಾಗಿರುವ ರೈಲ್ವೆ ಕಂಪೆನಿಯ ಷೇರುಗಳಿಗಾಗಿ, ಷೇರು 1ಕ್ಕೆ ರೂ. 1 ರಂತೆ ಆಗುವ ಡಿಪಾಜಿಟ್ ನೊಬಲಗು ರೂ. ಗಳನ್ನು ಇದರ ಜೊತೆಯಲ್ಲಿ ರವಾನಿಸಿರುತ್ತೇನೆ; ಅಷ್ಟು ಸಂಖ್ಯೆಯ ಷೇರುಗಳನ್ನು ರೈಲ್ವೆ ಸೂಚನಪತ್ರವ ನಿಬಂಧನೆಗಳನ್ನನುಸರಿಸಿ ನನಗೆ ಕೊಡಬೇಕೆಂದು ಕೋರುತ್ತೇನೆ. ನಾನು ಅಷ್ಟು ಷೇರುಗಳನ್ನು ತೆಗೆದುಕೊಳ್ಳಲು ಒಪ್ಪಿರುತ್ತೇನೆ; ಮತ್ತು ಅವುಗಳು ನನಗೆ ಕೊಡಲ್ಪಟ್ಟ ನಂತರ ಬಾಕಿಯಾಗುವ ಮೊಬಲಗನ್ನು ಸೂಚನಪತ್ರದಲ್ಲಿ ವಿಧಿಸಿರುವ ವೇರಿಗೆ ಪಾವತಿ ಮಾಡಲು ಬದ್ಧನಾಗಿರುತ್ತೇನೆ. ಸದರೀ ಸಂಖ್ಯೆಯ ಷೇರುಗಳನ್ನು ನಾನು ಹೊಂದಿದವನೆಂದು ನನ್ನನ್ನು ನೀವು ರಿಜಿಸ್ಟರ್ ಮಾಡಿಕೊಳ್ಳಬಹುದು; ಮತ್ತು ಕಂಪೆನಿಯ ಮೆಮೊರಾಂಡಂ ಮತ್ತು ನಿಬಂಧನೆಗಳಂತೆ ಸದರೀ ಷೇರುಗಳನ್ನು ನಾನು ಇಟ್ಟುಕೊಳ್ಳಲು ಈ ಮೂಲಕ ಒಪ್ಪಿರುತ್ತೇನೆ.

ತಮ್ಮ ವಿಧೇಯ,

ಸಂಪೂರ್ಣವಾದ ಹೆಸರು _____

ವಿಳಾಸ, ಉದ್ಯೋಗ _____

ತಾರೀಖು _____

ರುಜು _____